೦೧ – ಕನ್ನಡ
ಮಾದರಿ ಪ್ರಶ್ನೆ ಪತ್ರಿಕೆ

ಅವಧಿ : ೩.೧೫ ಗಂಟೆಗಳು ಅಂಕಗಳು : ೧೦೦

ಅ – ವಿಭಾಗ

I. ಅ. ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ 1×10=10

1. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು?
2. ಅರಣ್ಯವಾಸದಲ್ಲಿ ದ್ರೌಪದಿಯನ್ನು ಎಳೆದೊಯ್ದವರು ಯಾರು?
3. ಜಾಲಿಯ ಮರದಂತೆ ಇರುವವರು ಯಾರು?
4. ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು?
5. ಶಿಲುಬೆ ಏರಿದವರು ಯಾರು?
6. ಸರಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನ ಅಭಿಪ್ರಾಯವೇನು?
7. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಯಾವುದು?
8. ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು?
9. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು?
10. ಚಿಪ್ ಎಂದರೇನು?
11. ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು?
12. ಶಿವೇಗೌಡರು ರಾತ್ರೋರಾತ್ರಿ ಆನೆ ಕರೆದುಕೊಂಡು ಹೋದದ್ದೇಕೆ?
13. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್ ಮನ್ ಯಾರು?
14. ಆನೆ ಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?
15. ಪೋಲಿಸರು ಏನೆಂದು ಮಹಜರು ಬರೆದುಕೊಂಡರು?

ಆ - ವಿಭಾಗ

II. ಅ. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ 2× 4 =8

16. ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?
17. ಯಾರು ಮನೆ ಮನೆಯನ್ನು ತಿರಿಯನು? ಕೆರೆಯುದಕವನ್ನು ಅರಸದವನು ಯಾರು?
18. ಮಲಗಿದ್ದ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?
19. ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು?
20. ಹಡೆದವ್ವನನ್ನು ಯಾವಾಗ ನೆನೆಯಬೇಕು?
21. ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?

ಆ. ಯಾವುದಾದರೂ ಮೂರು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ . 2 ×3 =6

22. ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ ಯಾಕೆ?
23. ಬ್ರಿಟಿಷರು ಬರುವ ಮೊದಲು ವಾಲ್ ಪರೈ ಹೇಗಿತ್ತು?
24. ಮುದ್ದೇಗೌಡರು ಪಥ್ಯದ ವಿಚಾರವಾಗಿ ಹೊಂದಿದ್ದ ನಿಲುವೇನು?
25. ನಮ್ಮ ಸಾರ್ವಜನಿಕ ಶಾಲೆಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?

26. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?

ಇ. ಯಾವುದಾದರೂ ಮೂರು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ 2.× 3 =6

27. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?
28. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದನು?
29. ನಾಯಿಯನ್ನು ಕೊಲ್ಲದೆ ಸುಳ್ಳು ಹೇಳಿದ್ದಕ್ಕೆ ನಿರೂಪಕರು ಯಾವ ಸಲಹೆ ನೀಡಿದರು?
30. ಆನೆಯನ್ನು ಹದ್ದು ಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ಹೇಳಿದ್ದ?
31. ಅರಣ್ಯ ಇಲಾಖೆಯವರು ನಾಗರಾಜನ ಬಗ್ಗೆ ಏನೆಂದು ಜಾಹೀರಾತು ನೀಡಿದರು?

## ಇ. ವಿಭಾಗ

III. ಅ. ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ 3× 2 =6

32. ಅಸಾಧ್ಯಮಪ್ಪ ಮರುವಕ್ಕಮಿಲ್ಲ.
33. ಕೂಳುಗೇಡಿಂಗೊಡಲ ಹೊರುವಿರಿ.
34. ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ.
35. ನೀ ತಂಪ ನನ್ನ ತವರೀಗಿ.

ಆ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ 3 ×1= 3

36. ಇಲ್ಲಿ ಸವತಿ ಮಾತ್ಸರ್ಯಕ್ಕೆ ಎಡೆ ಇಲ್ಲ.
37. ಇದೇ ಲೋಟವಲ್ಲವೆ… ತನ್ನ ಬೆವರಿನ ಬೆಲೆ ಕಳೆದದ್ದು.
38. ಮಗುವೇ ಮೊದಲ ವಿಜ್ಞಾನಿ.

ಇ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ 3 ×1 =3

39. ಆನೆ ಸಾಕುವುದು ಎಂದರೆ ಎಲೆಕ್ಷನ್ ಗೆ ನಿಂತ ಹಾಗೆ.
40. ವೆಪನ್ ಸಾರ್; ವೆಪನ್ ನಮಗೆ ಮುಖ್ಯ.
41. ಈ ಕಂಬದೊಳಗೆ ಏನೋ ಸೇರ್ಕೊಂಡಿದೆ.

## ಈ. ವಿಭಾಗ

IV. ಅ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ 4×3=12

42. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?
43. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತ ದ ನುಡಿಗಳು ಯಾವುವು?
44. ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಹೇಗೆ ವಿವರಿಸಿದ್ದಾನೆ?
45. ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿವೆ? ವಿವರಿಸಿ.
46. ಶಿಲುಬೆ ಏರಿದ್ದಾನೆ ಕವನದಲ್ಲಿ ಜೀಸಸ್ ವ್ಯಕ್ತಿತ್ವ ಮತ್ತು ಆತನ ಮಹತ್ವವನ್ನು ಕವಿ ಯಾವ ರೀತಿ ನಿರೂಪಿಸಿದ್ದಾರೆ?

ಆ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ . 4×2=8

47. ಬಸಲಿಂಗ ಡಾ. ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೇ ಇರಲು ಕಾರಣಗಳೇನು?
48. ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್ ಪರ್‍ಗೆ ಒದಗಿದ ಸಮಸ್ಯೆಗಳೇನು?
49. ಸೀತಾ ಎಂಬ ಗೆಳತಿಯ ಗುಣ ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?
50. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

ಇ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ
4×2=8

51. ಲೇಖಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ
52. ಪೋಸ್ಟಮನ್ ಜಬ್ಬಾರನಿಗೆ ಒದಗಿದ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?
53. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿಮಾತ್ಸರ್ಯ ಮೂಡಲು ಕಾರಣವೇನು?
54. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

ಉ. ವಿಭಾಗ

V. ಅ. ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ 5×1=5

55. ರಾವಣನ ರೂಪು ಸೀತಾ
ದೇವಿಗೆ ತೃಣ ಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯ ತೆರದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿ ಯರ್ ಸತಿಯರ್

56. ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನ ಕೇಳಿ
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ.

ಭಾಷಾಭ್ಯಾಸ

IV. ಅ. ಈ ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ
2×6=12

57. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪದಗಳ ಅರ್ಥ ಬರೆಯಿರಿ
ಮರ್ಕಟ, ಉದಕ, ತಮ, ಮೂಡಣ.
58. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ
ಕರ, ಕಲಿ, ಅರಸು, ಮುನಿ.
59. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪದಗಳ ಧಾತುರೂಪಗಳನ್ನು ಬರೆಯಿರಿ
ನೋಡಿದಳು, ಹಾಡಿದರು, ಸೋತನು, ನೆಗೆದರು
60. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪದಗಳ ಗುಣವಾಚಕಗಳನ್ನು ಬರೆಯಿರಿ
ಹುಸಿನಿದ್ದೆ, ಹಿತವಚನ, ಕಿರುಹಾದಿ, ದುರ್ಜನ.
61. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪದಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ

BYJU'S The Learning App

ಹೆಸರಿಸಿ

ಅಂಧಕನು, ಧಣಿಗಳಿಂದ, ಮನೆಗೆ, ಮುಖದಲ್ಲಿ .

62. ಯಾವುದಾದರೂ ಎರಡು ಅನ್ಯದೇಶೀಯ ಪದಗಳನ್ನು ಬರೆಯಿರಿ
63. ಈ ಕೆಳಗಿನ ಯಾವುದಾದರೂ ಎರಡು ಪದಗಳಿಗೆ ತದ್ಭವರೂಪ ಬರೆಯಿರಿ

ರಾಜ, ಬ್ರಹ್ಮ, ಕಾರ್ಯ, ಆಕಾಶ

64. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ

ರಾಮಬಾಣ, ಕಾಲುಕೀಳು, ಕೈಕೊಡು, ತಲೆದೂಗು.

ಆ. ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ 5×1=5

65. ಪುಸ್ತಕಗಳ ಮಹತ್ವ
66. ಜಲಮಾಲಿನ್ಯ

ಇ. ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ 4×1=4

67. ನಿಮ್ಮ ಕಾಲೇಜಿನಲ್ಲಿ ನಡೆದ ಕನ್ನಡ ರಾಜ್ಯೋತ್ಸವದ ಬಗ್ಗೆ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ
68. ವರ್ಗಾವಣೆ ಪತ್ರವನ್ನು ಕೋರಿ ನಿಮ್ಮ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ

ಈ. ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ 4×1=4

69. ದೇಶ ಸುತ್ತಬೇಕು ಕೋಶ ಓದಬೇಕು.
70. ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ.

************

| | ನೀಲನಕ್ಷೆ | | | | | |
|---|---|---|---|---|---|---|
| | | ೧ ಅಂಕ | ೨ಅಂಕ | ೩ಅಂಕ | ೪ಅಂಕ | ೫ಅಂಕ |
| I | ಪದ್ಯ ಭಾಗ | | | | | |
| 1 | ಕದಡಿದ ಸಲಿಲಂ ತಿಳಿವಂದದೆ | | 1 | 1 | | 1 |
| 2 | ವಚನಗಳು | 1 | 1 | | 1 | |
| 3 | ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು | 1 | 1 | 1 | 1 | |
| 4 | ಪಗೆಯಂ ಬಾಲಕನೆಂಬರೆ | | 1 | | 1 | |
| 5 | ಜಾಲಿಯ ಮರದಂತೆ | 1 | | 1 | | |
| 6 | ಹಬ್ಬಲಿ ಅವರ ರಸಬಳ್ಳಿ | 1 | 1 | 1 | | |
| 7 | ಬೆಳಗು ಜಾವ | | | | | 1 |
| 8 | ಮುಂಬೈ ಜಾತಕ | | | | 1 | |
| 9 | ಶಿಲುಬೆ ಏರಿದ್ದಾನೆ | 1 | 1 | | 1 | |
| II | ಗದ್ಯ ಭಾಗ | | | | | |
| 1 | ಮುಟ್ಟಿಸಿಕೊಂಡವನು | 1 | 1 | | 1 | |
| 2 | ವಾಲ್ ಪರ್ರೈ ಅಭಿವೃದ್ಧಿ ತಂದ ದುರಂತ | 1 | 1 | | 1 | |
| 3 | ಆಯ್ಕೆ ಇದೆ ನಮ್ಮ ಕೈಯಲ್ಲಿ | 1 | 1 | | 1 | |
| 4 | ಕನ್ನಡವನ್ನು ಕಟ್ಟುವ ಕೆಲಸ | 1 | 1 | 1 | | |
| 5 | ದಣಿಗಳ ಬೆಳ್ಳಿ ಲೋಟ | | | 1 | 1 | |
| 6 | ಬದುಕನ್ನು ಪ್ರೀತಿಸಿದ ಸಂತ | 1 | 1 | 1 | | |
| III | ದೀರ್ಘ ಗದ್ಯ | | | | | |
| 1 | ಅಧ್ಯಾಯ 1-3 | 2 | 1 | 1 | 1 | |
| 2 | ಅಧ್ಯಾಯ 4-6 | 1 | 2 | 1 | 1 | |
| 3 | ಅಧ್ಯಾಯ 7-9 | 1 | 1 | 1 | 1 | |
| 4 | ಅಧ್ಯಾಯ 10-12 | 1 | 1 | | 1 | |
| IV | ಭಾಷಾಭ್ಯಾಸ | | | | | |
| V | ಪ್ರಬಂಧ ರಚನೆ | | | | | 2 |
| VI | ಪತ್ರಲೇಖನ | | | | 2 | |
| VII | ಗಾದೆಮಾತು ವಿಸ್ತರಣೆ | | | | 2 | |

ನೀಲನಕ್ಷೆ ಮತ್ತು ಮಾದರಿ ಪ್ರಶ್ನೆಪತ್ರಿಕೆಗಳ ಸಿದ್ಧತೆಯನ್ನು ಇಲಾಖೆಯು ನೀಡಿದ ಎಲ್ಲಾ ಸೂಚನೆಗಳನ್ನು ಗಮನಿಸಿ ಜಾಗರೂಕತೆಯಿಂದ ಸಿದ್ಧಪಡಿಸಿದೆ ಹಾಗೂ ಯಾವುದೇ ತಪ್ಪು ಇರುವುದಿಲ್ಲವೆಂದು ಪ್ರಮಾಣೀಕರಿಸಿದೆ.




ಮುಖ್ಯಸ್ಥರು



ಸದಸ್ಯರು



ಸದಸ್ಯರು